ಮಟ್ಟಿಗೆ ಕಲಾಸಾಮಗ್ರಿಯೆನಿಸಿಕೊಂಡಿರುವ ಹೊರಗಣ ರೂಪ-ವಸ್ತುಗಳ ಸಹಾಯ ನನ್ನ ಆತ್ಮಸಾಧನೆಗೆ ಅಗತ್ಯವಿಲ್ಲ. ನನ್ನ ಬಳಿ ಕಲಾಕೃತಿಗಳಾಗಲಿ ಕಲಾವಸ್ತುಗಳಾಗಲಿ ಕಾಣದಿದ್ದರೂ, ನನ್ನ ಜೀವನವು ಕಲಾಪರಿಪೂರ್ಣವೆಂದು ನಾನು ಹೇಳುತ್ತೇನೆ. ನನ್ನ ಗುಡಿಸಲಿನ ಗೋಡೆಗಳು ಶೂನ್ಯವಾಗಿರಬಹುದು. ನೆತ್ತಿಯ ಮೇಲೆ ನೀಲಾಗಿ ಕವಿದಿರುವ ಅನಂತ ಸೌಂದರ್ಯದಿಂದ ತುಂಬಿದ ತಾರಾಮಂಡಲವನ್ನು ನೋಡಬೇಕೆಂದು ಗುಡಿಸಲಿನ ಚಪ್ಪರವನ್ನೂ ನಾನು ತೆಗೆದೇನು. ಮೇಲೆ ನೋಡಿದರೆ ಕಾಣುವ ನಕ್ಷತ್ರ- ಗ್ರಹಗಳ ಅಲೌಕಿಕ ಲೀಲೆಯ ಆನಂದವನ್ನೂ ಆ ರಮಣೀಯ ದೃಶ್ಯಗಳನ್ನೂ ಯಾವ ಮಾನವ ಕಲಾಕೃತಿ ಕೊಡಬಲ್ಲದು? ಹೀಗೆಂದರೆ ನಾನು ಸಾಮಾನ್ಯ ಕಲಾ-ವಸ್ತುಗಳನ್ನೆಲ್ಲ ಬಹಿಷ್ಕರಿಸಿದ್ದೇನೆಂದು ತಿಳಿಯಬಾರದು. ನಿಸರ್ಗ ಸೌಂದರ್ಯದ ಚಿರಂತನ ಪ್ರತೀಕಗಳೆದುರು ಇವು ಎಷ್ಟು ನಿಸ್ಸಾರವೆಂಬುದನ್ನು ತೋರಿಸಿದೆ, ಅಷ್ಟೆ. ಮಾನವನ ಕಲಾಕೃತಿಗೆ ಬೆಲೆ ಸಿಕ್ಕಬೇಕಾದರೆ, ಅವು ಆತ್ಮವಿಕಾಸಕ್ಕೆ ಸಹಾಯವಾಗಬೇಕು.'

ಕಲೆ ಇಂದ್ರಿಯಾನುಭೂತಿಯಲ್ಲ, ಭಾವಾನುಭೂತಿ. ರೂಪವಲ್ಲ ಕಲೆಯ ರಾಜ್ಯ, ಗುಣ. ಸ್ಥೂಲಶರೀರವಲ್ಲ ಅದರ ಲಕ್ಷ್ಯ, ಸೂಕ್ಷ್ಮ ಶರೀರ. ಅದರಲ್ಲಿ ವ್ಯಕ್ತಿವಿಕಾರಕ್ಕೆ ಎಡೆಯಿರಬಾರದು. ಸಮಷ್ಟಿ ವಿಕಾಸಕ್ಕೆ ಹಾದಿಯಿರಬೇಕು. 'ಸರ್ವೋತ್ಕೃಷ್ಟವಾದ ಕಲೆ ಸರ್ವಭೋಗ್ಯವಾದೀತು; ವ್ಯಕ್ತಿ ಭೋಗ್ಯವಾಗದು'. ಬೇರೆಬೇರೆ ರುಚಿಗಳಿರುವಾಗ ಇದು ಸಾಧ್ಯವೆ? 'ಬಾಹ್ಯಾವಲಂಬನೆ ಕಡಿಮೆಯಾದರೆ ಕಲೆ ಸರ್ವಭೋಗ್ಯವಾಗುವುದು. ಎಂತಲೇ ನಾನು ಪದೇಪದೇ ಅನ್ನುತ್ತೇನೆ. ಲೆಕ್ಕವಿಲ್ಲದ ಚಿಕ್ಕೆಗಳೂ ಚಂದ್ರನ ಬೆಳಗುವ ಮುಗಿಲನ್ನು ನೋಡಿ ಯಾರು ಜಗತ್ಕರ್ತನ ಲೀಲೆಯಲ್ಲಿ ತಲ್ಲೀನರಾಗಬಲ್ಲರೋ ಅವರಿಗೆ ಚಿತ್ರಕಾರನು ಬರೆದ ಮುಗಿಲು ನಸುಕು-ಸಂಜೆಗಳನ್ನು ನೋಡುವ ಅಗತ್ಯವೇನು? ಗಳಿಗೆಗಳಿಗೆಗೂ ಹೊಚ್ಚ ಹೊಸ ಬಣ್ಣ ತೋರುತ್ತ ಹೊಸಹೊಸ ಸೊಬಗನ್ನು ಬೀರುವ ಆಕಾಶದಿಂದಲೇ ಅವರು ತಮಗೆ ಬೇಕಾದುದನ್ನು ಹೀರಿಕೊಳ್ಳಬಲ್ಲರು.

'ವಿಚಾರಮಾಡಿ ನೋಡಿ. ಎಲ್ಲಿ ಸೃಷ್ಟಿದೇವಿ ನಮ್ಮ ಕಣ್ಣಿಗೆ ಹಬ್ಬವಾಗಿ ರಮಣೀಯವಾಗಿ ಸೂರ್ಯೋದಯವನ್ನು ರಚಿಸಿಲ್ಲವೋ ಅಲ್ಲಿ ಮನುಷ್ಯ ಬರೆದ ಚಿತ್ರ ಕೊಂಚ ತೃಪ್ತಿ ಕೊಟ್ಟೀತು. ವರುಷದಲ್ಲಿ ಹನ್ನೆರಡು ತಿಂಗಳು, ನಿಸರ್ಗದ ಸೂರ್ಯೋದಯ ಸೂರ್ಯಾಸ್ತಗಳ ಲೀಲೆ ನೋಡಲು ಸಿಕ್ಕುವಲ್ಲಿ, ಚಿತ್ರದ ಸೂರ್ಯೋದಯ ಸೂರ್ಯಾಸ್ತಗಳನ್ನು ನೋಡಲು ಮನುಷ್ಯ ಕಾತರನಾದಾನೆ? ವರುಷದಲ್ಲಿ ಆಗೊಮ್ಮೆ ಈಗೊಮ್ಮೆ ಅದರ ನೋಟ ಲಭಿಸುವ ಸ್ಥಳದಲ್ಲಿ ತನಗಾಗಿ, ತನ್ನಂಥವರಿಗಾಗಿ ಚಿತ್ರಕಾರ ಚಿತ್ರ ಬರೆಯುತ್ತಾನೆ; ಮೂರ್ತಿಯೊಂದನ್ನು ನಿರ್ಮಿಸುತ್ತಾನೆ. ಮೂರ್ತಿಯ ಒಳಗಿನ ಭಗವಂತನ ಚಿಂತನೆ-ದರ್ಶನಗಳಿಲ್ಲದೆಯೇ ಮೂರ್ತಿಯನ್ನು ಮೂಡಿಸಬಲ್ಲವರ ಮಾತೇ ಬೇಡ. ತನ್ನ ಹೃದಯದಲ್ಲೇ ಸದಾ ಭವ್ಯಾಕಾಶದ ಲೀಲೆಯನ್ನು ನೋಡಬಲ್ಲವನಿಗೆ ಹೊರಗಣ ಮುಗಿಲಿನ ಚಂದ್ರ-ನಕ್ಷತ್ರಗಣವನ್ನು ನೋಡುತ್ತಿರಬೇಕಾದ ಅಗತ್ಯವೂ ಕೂಡ ಕಡಿಮೆಯಾಗುತ್ತದೆ'.

'ನಿಜವಾಗಿ ನೋಡಿದರೆ ಒಳಗೆ ಇಲ್ಲದುದು ಹೊರಗೆ ಉಂಟೆ? ದೃಷ್ಟಿಯಲ್ಲಿಲ್ಲದುದು ಸೃಷ್ಟಿಯಲ್ಲಿದೆಯೆ?'



**ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ 'ಪರ್ಣಕುಟಿ' ಕೃತಿಯಿಂದ (ಪ್ರ: ಸಾಧನಾ ಮುದ್ರಣಾಲಯ, ಧಾರವಾಡ) ಆಯ್ದಭಾಗ.**

●